

*ವಿಜಯದಾಸರು* :

**ಅಜ್ಞಾನತಿಮಿರಮಿಚ್ಛೇದಂ ಬುದ್ಧಿಸಂಪ್ರತ್ಪ್ರದಾಯಕಂ ।**

**ವಿಜ್ಞಾನವಿಮಲಂ ಶಾಂತಂ ವಿಜಯಾಖ್ಯ ಗುರುಂ ಭಜೇ ॥**

ನಮ್ಮ ಅಜ್ಞಾನವೆಂಬ ಅಂಧಕಾರವನ್ನು ನಾಶಮಾಡುವ, ಬುದ್ಧಿ ಸಂಪತ್ತನ್ನು ನೀಡುವ, ಜ್ಞಾನದಿಂದ ಪವಿತ್ರ ಸ್ವರೂಪರಾದ ಭಗವಂತನಲ್ಲಿಯೇ ಮಗ್ನರಾದ ವಿಜಯದಾಸರನ್ನು ಭಜಿಸುತ್ತೇನೆ.

# *ವಿಜಯದಾಸರ ಬಗ್ಗೆ ಕೆಲವು ಮಾಹಿತಿಗಳು –*

ತಂದೆ – ಶ್ರೀನಿವಾಸಪ್ಪ ತಾಯಿ – ಕೂಸಮ್ಮ

ಗೋತ್ರ – ಭಾರಧ್ವಾಜ ಜನನ – 1682 ದುಂದುಭಿ ಸಂವತ್ಸರ

ಜನ್ಮಸ್ಥಳ – ಚೇಕಲಪರವಿ (ರಾಯಚೂರು ಜಿಲ್ಲೆ ಮಾನ್ವಿ ಹತ್ತಿರದ ತುಂಗಭದ್ರಾ ನದಿ ತೀರ)

ಜನ್ಮನಾಮ – ದಾಸಪ್ಪ (ಹಿರಿಯ ಮಗ) – ಕೂಸೀಮಗ ದಾಸನೆಂದು ಪ್ರಸಿದ್ಧಿ.

ಉಪನಯನ – ಕ್ರಿ.ಶ. 1690 ಹೆಂಡತಿ – ಅರಳಮ್ಮ

ಮಗ – ಶೇಷಗಿರಿ ಸಾಕುಮಗ – ಮೋಹನ (ಮೋಹನದಾಸರು)

ಅಂಕಿತ – ವಿಜಯವಿಠಲ

ವಿಜಯದಾಸರು ಕಟ್ಟೆ ಇರುವುದು – ಭಾಸ್ಕರ ಕ್ಷೇತ್ರವೆಂದು ಪ್ರಖ್ಯಾತವಾದ ಚಿಪ್ಪಗಿರಿ

ಶಿಷ್ಯವೃಂದ – ಶ್ರೀಗೋಪಾಲದಾಸರು(ಭಾಗಣ್ಣ), ಮೋಹನದಾಸರು(ಮೋಹನ), ವೇಣುಗೋಪಾಲವಿಠಲದಾಸರು (ಪಂಗನಾಮ ತಿಮ್ಮಣ್ಣ), ರಾಮಚಂದ್ರ ವಿಠಲದಾಸರು, ಮಧ್ವೇಶವಿಠಲದಾಸರು, ಹಯಗ್ರೀವ ವಿಠಲದಾಸರು, ಗುರುವಿಜಯವಿಠಲದಾಸರು (ಮೊದಲಕಲ್ಲು ಶೇಶಗಿರಿದಾಸರು), ಇತ್ಯಾದಿ ೬೦ಕ್ಕೂ ಹೆಚ್ಚು ಶಿಷ್ಯರು.

ಸೋದರರು – ಹಯವದನ ವಿಠಲದಾಸರು, ಆನಂದದಾಸರು

ವಾದಿನಿಗ್ರಹ – ಕಾಶಿಯಲ್ಲಿ ರಾಮಶಾಸ್ತ್ರಿ ಎಂಬ ಅದ್ವೈತ ಪಂಡಿತನನ್ನು ಪರಾಭವಗೊಳಿಸಿದ್ದು

ಕೃತಿಗಳು – ೨೫ಸಾವಿರಕ್ಕೂ ಹೆಚ್ಚು (೨೦೦೦ ಮಾತ್ರ ಉಪಲಬ್ಧ)

ವಿಜಯದಾಸರ ಆರಾಧನೆ – ಕಾರ್ತೀಕ ಶುದ್ಧ ದಶಮಿ

ವಿಜಯದಾಸರು ಚಿಪ್ಪಗಿರಿಯಲ್ಲಿ ವೇಣುಗೋಪಾಲಸ್ವಮಿಯನ್ನು ಪ್ರತಿಷ್ಟಾಪಿಸಿದ್ದಾರೆ

ಸಮಕಾಲೀನರು – ಶ್ರೀಸತ್ಯಾಭಿನವತೀರ್ಥರು, ಶ್ರೀಸತ್ಯಪೂರ್ಣತೀರ್ಥರು, ಶ್ರೀಸತ್ಯವಿಜಯತೀರ್ಥರು,

ಶ್ರೀ ಸತ್ಯಪ್ರಿಯತೀರ್ಥರು, ಶ್ರೀಸತ್ಯಬೋಧತೀರ್ಥರು, ಶ್ರೀಸುಮತೀಂದ್ರತೀರ್ಥರು, ಶ್ರೀಉಪೇಂದ್ರತೀರ್ಥರು, ಶ್ರೀ ವಾದೀಂದ್ರತೀರ್ಥರು, ಶ್ರೀ ವಸುದೇಂದ್ರತೀರ್ಥರು, ಶ್ರೀ ರಘುನಾಥತೀರ್ಥರು, ಶ್ರೀ ವ್ಯಾಸತತ್ವಜ್ಞರು, ದಿವಾನ ವೆಂಕಣ್ಣಪಂತ್, ದಿವಾನ್ ರುಕ್ಕಣ್ಣಾ, ತಿಮ್ಮಣ್ಣಯ್ಯ, ಜಗನ್ನಾಥದಾಸರು, ಪ್ರಸನ್ನವೆಂಕಟದಾಸರು, ಹೆಳವನಕಟ್ಟೆ ಗಿರಿಯಮ್ಮ, ಇತ್ಯಾದಿ.

## *ಪವಾಡಗಳು :–*

೧. ಗೋಪಾಲದಾಸರ ಮೂಲಕ ಜಗನ್ನಾಥದಾಸರಿಗೆ ಅಪಮೃತ್ಯು ಪರಿಹಾರಿ – ಗೋಪಾಲದಾಸರಿಂದ ೪೦ವರ್ಷ ಆಯಸ್ಸು ಪ್ರಧಾನ.

೨. ಗೋಪಾಲದಾಸರಿಗೆ ಅಪಮೃತ್ಯು ಪರಿಹಾರ – ಒಮ್ಮೆ ಗೋಪಾಲದಾಸರು ಶ್ರೀಕೃಷ್ಣನ ದರ್ಶನಕ್ಕಾಗಿ ಉಡುಪಿ ಕ್ಷೇತ್ರಕ್ಕೆ ಹೋಗಿ ಬರಲು ಅನುಮತಿ ಬೇಡಿದಾಗ, ಇವರಿಗೆ ಬರಬಹುದಾದ ತೊಂದರೆಯನ್ನು ತಿಳಿದು, *ವಿಜಯದಾಸರು, ಒಂದು ಊಗಾಭೋಗ ರಚಿಸಿ ಉಪದೇಶಿಸಿದರು –*

***ಒಂದು ಕೈಯಲಿ ಖಡ್ಗ***
***ಒಂದು ಕೈಯಲಿ ಹಲಿಗೆ ಅಂದವಾಗಿ ಹಿಡಿದುಕೊಂಡು ದಿವರಾತ್ರಿಯಲಿ***
***ಬಂದು ಬದಿಯಲಿ ನಿತ್ಯ ಬಾರಾಸನನಾಗಿ***
***ಹಿಂದುಮುಂದುಪದ್ರವಾವಾಗದಂತೆ***
***ಇಂದಿರೇರಮಣ ಕಾಯುತ್ತಲಿರೆ ಎನಗಾವ ಬಂಧನಗಳು ಇಲ್ಲ ಧನ್ಯ ಧನ್ಯ***
***ಕಂದರ್ಪನಯ್ಯ ಸಿರಿ ವಿಜಯವಿಠಲರೇಯ***
***ದೇವ ಆಪತ್ತು ಬರಲೀಯ ನೋಡಿ ॥***

ದಾರಿಯಲ್ಲಿ ಭೀಮನೆಂಬ ದರೋಡೆಕಾರನು ಇವರನ್ನು ದರೋಡೆ ಮಾಡಲು ಬಂದಾಗ, ಊಗಾಭೋಗದ ಪ್ರಭಾವದಿಂದ ಆ ದರೋಡೆಕಾರನಿಗೆ "ಖಡ್ಗದಾರಿಯಾಗಿ ದಾಸರನ್ನು ಕಾಯುವ ಶ್ರೀಹರಿಯನ್ನು ಕಂಡು" ಹೆದರಿ ಓಡಿ ಹೋದದ್ದು.

೩. ಪಂಗನಾಮ ತಿಮ್ಮಣ್ಣದಾಸರಿಗೆ ಅಪಮೃತ್ಯು ಪರಿಹಾರ

೪. ಮೋಹನದಾಸರಿಗೆ ಆರೋಗ್ಯಭಾಗ್ಯ – ಕಜ್ಜಿರೋಗದಿಂದ ಬಳಲುತ್ತಿದ್ದ ಒಬ್ಬ ಸಾಧ್ವಿಯೊಬ್ಬಳ ಮಗುವಿಗೆ ಭಗವಂತನನ್ನು ನೆನೆದು ಕೂಸಿನ ಅಂಗಾಂಗಗಳನ್ನು ಸವರುತ್ತ ಹೋದಂತೆ ಕೂಸಿನ ಕಜ್ಜಿ ಮಾಯವಾಗಿ ಮೋಹಕ ಮಗುವಾಗಿ ಮುಂದೆ "ಶ್ರೀಮೋಹನದಾಸ"ರಾದರು.

೫. ಒಮ್ಮೆ ಕಲ್ಲೂರು ಸುಬ್ಬಣ್ಣಾಚಾರ್ಯ ಎಂಬ "ಶ್ರೀಮನ್ಯಾಯಸುಧಾ" ವಿದ್ವಾಂಸರು ಕಠಿನ ವಾಕ್ಯಗಳ ಸುಧಾನುವಾದ ಮಾಡುತ್ತಿದ್ದರು. ಆದರೆ ಕಾರಣಾಂತರದಿಂದ "ಮಂಡಿಗೆ" ಮಾಡುವ ಅಡಿಗೆಯವನು ಬರಲಿಲ್ಲವಂತೆ. ಆಗ ವಿಜಯದಾಸರೇ ಒಬ್ಬ ಅಡಿಗೆಯವನ ವೇಷ ಧರಿಸಿ, ಅಡಿಗೆಯವನ ಕಾರ್ಯವೆಲ್ಲಾ ಪೂರೈಸಿದರು. ವಿಜಯದಾಸರು ಸುಧಾ ಶ್ರವಣಕ್ಕಾಗಿ ಆಗಮಿಸಿದರು. ದಾಸರನ್ನು ಕಲ್ಲೂರು ಸುಬ್ಬಣ್ಣಾಚಾರ್ಯರು ಅವಮಾನಿಸಿದಾಗ, ದಾಸರು ಒಬ್ಬ ಸಾಮಾನ್ಯ ಪೆದ್ದನ ಕೈಹಿಡಿದು ಅವನ ಕೈಲಿ ಸುಧಾನುವಾದ ಮಾಡಿಸುದ್ದು. ಆಗ ಸುಬ್ಬಾಣ್ಣಾಚಾರ್ಯರು ತಮ್ಮ ತಪ್ಪೊಪ್ಪಿಗೆ ನೀಡಿದಾಗ, ಶ್ರೀ ವೇಣುಗೋಪಾಲವಿಠಲದಾಸರ ಮೂಲಕ ಉಪದೇಶ ಪಡೆದು "ಶ್ರೀವ್ಯಾಸವಿಠಲ" ಎಂಬ ಅಂಕಿತಪಡೆದರು.

೬. ಒಮ್ಮೆ ತಿರುಪತಿಗೆ ಬ್ರಹ್ಮೋತ್ಸವಕ್ಕೆ ಹೋಗಿದ್ದಾಗ ವಿಜಯದಾಸರಿಗೆ ಗರ್ಭಾಂಗಣದಲ್ಲಿದ್ದ ಶ್ರೀನಿವಾಸನ ದರ್ಶನವಾಗಲಿಲ್ಲ. ಆಗ "ನಿನ್ನ ದರುಶನಕೆ ಬಂದವನವನಲ್ಲವೋ ದೇವ, ಪುಣ್ಯವಂತರ ದಿವ್ಯಚರಣ ನೋಡಲಿ ಬಂದೆ" ಎಂದು ಹಾಡಿದಾಗ ಪರಮಾತ್ಮನು ದರ್ಶನವಿತ್ತಿದ್ದು.

೭. ಒಮ್ಮೆ ಬ್ರಹ್ಮೋತ್ಸವಕಾಲದಲ್ಲಿ ದೇವಾಲಯದಲ್ಲಿ ಧ್ಯಾನಾಸಕ್ತರಾಗಿ, ಶ್ರೀ ಹರಿಯನ್ನು ತಮ್ಮ ಹೃದಯಕಮಲದಲ್ಲಿ ಕಂಡು ಧ್ಯಾನಾಸಕ್ತರಾದುದರಿಂದ ಅವರು ಎಷ್ಟು ಹೊತ್ತು ಧ್ಯಾನಿಸುತ್ತಾ ಕುಳಿತರೆಂಬುದು ಅವರಿಗರಿವಾಗಲಿಲ್ಲ. ಆಗ ರಥ ಎಷ್ಟು ಪ್ರಯತ್ನಿಸಿದ್ದರೂ, ಎಷ್ಟು ಜನ ಎಳೆದರೂ, ರಥ ಒಂದಡಿ ಕೂಡ ಮುಂದೆ ಬರಲಿಲ್ಲ. ಆಗ ವಿಜಯದಾಸರ ಹೃದಯದಲ್ಲಿದ್ದ ಬಿಂಬಮೂರ್ತಿ ಅದೃಶ್ಯವಾದ ಮೇಲೆ ಹೊರ ಬಂದನು. ಆಗ ವಿಜಯದಾಸರು "ಸಾಗಿಬಾರಯ ಭವ ರೋಗದ ವೈದ್ಯನೆ" ಹಾಡಿದಾಗ, ರಥ ಮುಂದೆ ನಡೆಯಿತು

**ಶ್ರೀ ವಿ ಜ ಯ ರಾ ಯ ರ ಕ ವ ಚ (ಶ್ರೀವ್ಯಾಸವಿಟ್ಠಲ ವಿರಚಿತ ನಕ್ಷತ್ರ ಮಾಲಿಕಾ ಸ್ತೋತ್ರ)**

**ರಾ ಗ – ಸೌ ರಾ ಷ್ಟ್ರ ( ಗೋ ಪೀ ಗೀ ತೆ ಮ ಟ್ಟು ) ತಾ ಳ – ಆ ದಿ ತಾ ಳ**

ಸ್ಮರಿಸಿ ಬದುಕಿರೊ ದಿವ್ಯ ಚರಣಕೆರಗಿರೊ

ದುರಿತ ತರಿದು ಪೊರೆವ ವಿಜಯಗುರುಗಳೆಂಬರ । ಪ ।

ದಾಸರಾಯನ ದಯವ ಸೂಸಿ ಪಡೆದನ ದೋಷರಹಿತನ ಸಂತೋಷಭರಿತನ । ೧ ।

ಜ್ಞಾನವಂತನ ಬಲು ನಿದಾನಿ ಶಾಂತನ ಮಾನವಂತನ ಮಹವದಾನ್ಯ ದಾಂತನ । ೨ ।

ಹರಿಯ ಭಜಿಸುವ ನರಹರಿಯ ಯಜಿಸುವ ದುರಿತ ತ್ಯಜಿಸುವ ಜನಕೆ ಹರುಷ ಸುರಿಸುವ । ೩ ।

ಮೋದಭರಿತನ ಪಂಚಭೇದವರಿತನ ಸಾಧು ಚರಿತನ ಮನೋವಿಷಾದ ಮರೆತನ । ೪ ।

ಇವರ ನಂಬಿದ ಜನಕೆ ಭವವಿದೆಂಬುದು ಹವಣವಾಗದೋ ನಮ್ಮವರ ಮತವಿದು । ೫ ।

ಪಾಪ ಕೋಟಿಯ ರಾಶಿ ಲೇಪವಾಗದೊ ತಾಪ ಕಳೆವನು ಬಲು ದಯಾಪಯೋನಿಧಿ । ೬ ।

ಕವನರೂಪದಿ ಹರಿಯ ಸ್ತವನಮಾಡಿದ ಭುವನ ಬೇಡಿದ ಮಾಧವನ ನೋಡಿದ । ೭ ।

ರಂಗನೆಂದನ ಭವವು ಹಿಂಗಿತೆಂದನ ಮಂಗಳಾಂಗನ ಅಂತರಂಗವರಿತನ । ೮ ।

ಕಾಶಿನಗರದಲ್ಲಿದ್ದ ವ್ಯಾಸದೇವನ ದಯವ ಸೂಸಿ ಪಡೆದನ ಉಲ್ಲಾಸತನದಲಿ । ೯ ।

ಚಿಂತೆಬ್ಯಾಡಿರೊ ನಿಶ್ಚಿಂತರಾಗಿರೊ ಶಾಂತ ಗುರುಗಳ ಪಾದವಾಂತು ನಂಬಿರೊ । ೧೦ ।

ಖೇದವಾಗದೊ ನಿಮಗೆ ಮೋದವಾಹುದೊ ಆದಿದೇವನ ಸುಪ್ರಸಾದವಾಹುದೊ । ೧೧ ।

ತಾಪ ತಡೆವನೊ ಬಂದ ಪಾಪ ಕಡಿವನೊ ಶ್ರೀಪತಿಯ ಪದದ ಸಮೀಪವಿಡುವನೊ । ೧೨ ।

ಗಂಗೆ ಮಿಂದರೆ ಮಲವು ಹಿಂಗಿತಲ್ಲದೆ ರಂಗನೊಲಿಯನೊ ಭಕ್ತರ ಸಂಗ ದೊರೆಯದೆ । ೧೩ ।

ವೇದ ಓದಲು ಬರಿದೆ ವಾದ ಮಾಡಲು ಹಾದಿ ದೊರೆಯದೊ ಬುಧರ ಪಾದ ನಂಬದೆ । ೧೪ ।

ಲೆಕ್ಕವಿಲ್ಲದಾ ದೇಶ ತುಕ್ಕಿ ಬಂದರು ದುಃಖವಲ್ಲದೆ ಲೇಶ ಭಕ್ತಿ ದೊರಕದೊ । ೧೫ ।

ದಾನ ಮಾಡಲು ದಿವ್ಯಗಾನ ಪಾಡಲು ಜ್ಞಾನ ದೊರೆಯದೊ ಇವರಧೀನವಾಗದೆ । ೧೬ ।

ಇಷ್ಟಿಯಾತಕೆ ಕಂಡ ಕಷ್ಟವ್ಯಾತಕೆ ದಿಟ್ಟ ಗುರುಗಳ ಪಾದ ಮುಟ್ಟಿ ಭಜಿಸಿರೊ । ೧೭ ।

ಪೂಜೆ ಮಾಡಲು ಕಂಡ ಗೋಜು ಬೀಳಲು ಬೀಜ ಮಾತಿನ ಫಲ ಸಹಜ ದೊರಕದೊ । ೧೮ ।

ಸುರರು ಎಲ್ಲರು ಇವರ ಕರವ ಪಿಡಿವರೊ ತರಳರಂದದಿ ಹಿಂದೆ ತಿರುಗುತಿಪ್ಪರೊ । ೧೯ ।

ಗ್ರಹಗಳೆಲ್ಲವು ಇವರ್ಗೆ ಸಹಾಯ ಮಾಡುತ ಅಹೋ ರಾತ್ರಿಲಿ ಸುಖದ ನಿವಹ ಕೊಡುವುವೊ । ೨೦ ।

ವ್ಯಾಧಿ ಬಾರದೊ ದೇಹ ಬಾಧೆ ತಟ್ಟದೊ ಆದಿ ದೇವನ ಸುಪ್ರಸಾದವಾಹುದೊ । ೨೧ ।

ಪತಿತ ಪಾಮರ ಮಂದಮತಿಯು ನಾ ಬಲು ತುತಿಸಲಾಪೆನೆ ಇವರ ಅತಿಶಯಂಗಳ । ೨೨ ।

ಕರುಣದಿಂದಲಿ ಎಮ್ಮ ಪೊರೆವನಲ್ಲದೆ ದುರಿತ ಕೋಟಿಯ ಬೇಗ ತರಿವ ದಯದಲಿ । ೨೩ ।

ಮಂದ ಮತಿಗಳು ಇವರ ಛಂದವರಿಯದೆ ನಿಂದೆ ಮಾಡಲು ಭವದ ಬಂಧ ತಪ್ಪದೊ । ೨೪ ।

ಇಂದಿರಾಪತಿ ಇವರ ಮುಂದೆ ಕುಣಿವನೊ ಅಂದ ವಚನವ ನಿಜಕೆ ತಂದು ಕೊಡುವನೊ । ೨೫ ।

ಉದಯಕಾಲದಿ ಈ ಪದವ ಪಠಿಸಲು ಮದಡನಾದರೂ ಜ್ಞಾನ ಉದಯವಾಹುದೊ । ೨೬ ।

ಸಟೆಯಿದಲ್ಲವೊ ***ವ್ಯಾಸವಿಟ್ಠಲ*** ಬಲ್ಲನೊ ಪಠಿಸಬಹುದಿದು ಕೇಳಿ ಕುಟಿಲ ರಹಿತರು । ೨೭ ।

**ದೇವರನಾಮ –**

ತಂದೆ ವಿಜಯರಾಯ ವ್ಯಾಳಿಗೆ ಬಂದ್ಯೋ ವಿಜಯರಾಯ । ಪ ।

ಹಿಂದೇಸು ಜನ್ಮವು ಮುಂದೇಸು ಜನ್ಮವು ಒಂದು ತಿಳಿಯದೆಂದೆಂದಿಗು ಎನ್ನಯ । ಅ ಪ ।

ಸೂರ್ಯನ ಸುತನಂತೆ ಅಲ್ಲಿ ಮಹಶೌರ್ಯ ದೂತರಂತೆ

ಕಾರ್ಯಾಕಾರ್ಯವು ತಿಳಿಯದೆ ನಿನ್ನ ಪರಿಚಾರ್ಯನ ಎಳೆತರೆ ಬಾರ್ಯಳು ಮೊರೆಯಿಡೆ । ೧ !

ಅದೇ ಧೈರ್ಯನೋಡಿ ಸುದತಿ ತಾಹೃದಯ ಬದ್ಧಮಾಡಿ

ಮಧುಸೂದನನೆ ಮುದತೀರಥರೆಂದೊದರಿದಳೊದರಿದಳ್ ವಿಜಯರಾಯರೆಂದು । ೨ ।

ಕರಗಳನೇ ಕಟ್ಟಿ ಎಳೆಯುತಿರೆ ಶಿರವನೆ ಮೆಟ್ಟಿ

***ಸಿರಿಮೋಹನವಿಟ್ಠಲನ*** ಪದವ ತೋರಿ ಧರಿಗೆ ತಂದುಬಿಟ್ಟೆ ಕರುಣಾಳುವೆ ಎನ್ನ । ೩ ।

**ರಾಗ – ಹಂಸಧ್ವನಿ ತಾಳ – ರೂಪಕತಾಳ**

ಗುರು ಪುರಂದರದಾಸರೆ ನಿಮ್ಮ ಚರಣಕಮಲವ ನಂಬಿದೆ । ಪ ।

ಗರುವರಹಿತನ ಮಾಡಿ ಎನ್ನನು ಪೊರೆವ ಭಾರವು ನಿಮ್ಮದೆ । ಅ ಪ ।

ಒಂದು ಅರಿಯದ ಮಂದಮತಿ ನಾನಿಂದು ನಿಮ್ಮನು ವಂದಿಪೆ

ಇಂದಿರೇಶನ ತಂದು ತೋರಿಸಿ ತಂದೆ ಮಾಡೆಲೊ ಸತ್ಕೃಪೆ । ೧ ।

ಪುರಂದರಘಡದೊಳಗೆ ನಿಂದು ನಿರುತ ದ್ರವ್ಯವ ಗಳಿಸಿದೆ

ಪರಮಪುರುಷನು ವಿಪ್ರನಂದದಿ ಕರವ ನೀಡಿ ಯಾಚಿಸೆ । ೨ ।

ಪರಮ ನಿರ್ಗುಣ ಮನವನರಿತು ಹರಿಗೆ ಸೂರೆಯ ನೀಡುತ

ಅರಿತು ಮನದೊಳು ಹರಿದು ಭವಗಳ ತರುಣಿ ಸಹಿತಾ ಹೊರಟನೆ । ೩ ।

ಮಾರಜನಕನ ಸನ್ನಿಧಾನದಿ ಸಾರಗಾನವ ಮಾಡುವ

ನಾರದರೆ ಈ ರೂಪದಿಂದಲಿ ಚಾರುದರುಶನ ತೋರಿದ । ೪ ।

ಅಜಭವಾದಿಗಳರಸನಾದ ***ವಿಜಯವಿಟ್ಠಲ***ನ ಧ್ಯಾನಿಪ

ನಿಜ ಸುಜ್ಞಾನವ ಕೊಡಿಸಬೇಕೆಂದು ಭಜಿಪೆನೊ ಕೇಳ್ ಗುರುವರ । ೫ ।

***ರಾಗ – ಆನಂದಭೈರವಿ ತಾಳ – ಮಿಶ್ರಛಾಪು***

ಟೀಕಾಚಾರ್ಯರ ಪಾದಸೋಕಿದ ಕೊನೆಧೂಳಿ । ತಾಕಿದ ಮನುಜರಿಗೆ । ಪ ।

ಕಾಕುಗೊಳಿಸುವ ಅನೇಕ ಪಾಪಂಗಳ । ನೂಕಿ ಬಿಸಾಡಲು ಸಾಕಾರ ಉಳ್ಳಂಥ।ಅಪ ।

ಮದ್ವಮತವೆಂಬೊ ದುಗ್ಧಾಬ್ಧಿಯೊಳು ಉದ್ಭವಿಸಿದ ಚಂದ್ರನೊ

ಅದ್ವೈತಮತವನಭೇದನ ಕುಠಾರ ವಿದ್ಯಾರಣ್ಯನ ಗರ್ವಕ್ಕೆ ಪರಿಹಾರ ।೧।

ತತ್ವವಾರಿಧಿಸಾರ ತತ್ವಸುಧಾಭಾಷ್ಯ ವಿಸ್ತಾರವಾಗಿರಲು

ಚಿತ್ರವಿಟ್ಟು ಮಾಡಿ ಟೀಕಾವನ್ನು ಸುತ್ತೇಳು ಜಗಕೆಲ್ಲ ಪ್ರಕಟಿಸಿ ಮೆರೆದಂಥ ।೨।

ಎಂದಿಗಾದರು ಒಮ್ಮೆ ಕೊನೆ ನಾಲಿಗೆಯಿಂದ ಬಿಂದು ಮಾತ್ರದಿ ನೆನೆಯೆ

ಮಂದಮತಿಗಾದರು ಅಜ್ಞಾನ ನಾಶನ ಸಂದೇಹವಿಲ್ಲವಯ್ಯ ಸ್ಮರಣೆ ಮಾಡಿದ ಮೇಲೆ।೩।

**ಜ** ಎಂದು ನುಡಿಯಲು ಜಯಶೀಲನಾಗುವ **ಯ** ಎಂದು ನುಡಿಯಲು ಯಮನಂಜುವ

**ತೀ** ಎಂದು ನುಡಿಯಲು ತಿಮಿರ ಪಾತಕ ಹಾನಿ **ರ್ಥ** ಎಂದು ನುಡಿದರೆ ತಾಪತ್ರಯ ಪರಿಹಾರ ।೪।

ಯೋಗಿ ಅಕ್ಷೋಭ್ಯರ ಕರಕಮಲ ಸಂಜಾತ ಭಾಗವತರ ಪ್ರಿಯನೆ

ಕಾಗಿಣಿ ತೀರದ ಮಳಖೇಡ ನಿವಾಸ ***ಶ್ರೀಗುರು ವಿಜಯವಿಟ್ಠಲನ*** ಸೇವಕದಾಸ

**ರಾ ಗ – ಶ ಂ ಕ ರಾ ಭ ರ ಣ : ತಾ ಳ – ಆ ದಿ ತಾ ಳ**

ಪಶುಪತಿಯ ತೋರಮ್ಮ। ಅಮ್ಮಾ ಪಶುಪತಿಯ ತೋರಮ್ಮ

ವಿಷವ ಸವಿದ ರುಂಡಮಾಲನ। ತ್ರಿಭುವನಪಾಲನ। ನೀಹಸನಾಗಿ ತೋರಮ್ಮ। ಪ।

ಮೈನಾಕ ನಂದನೆ । ಮಾಡುವೆನು ವಂದನೆ ಮನೋನಿಯಾಮಕನ। ಮುನಿವಂದಿತನ ।೧।

ಮತಿಯ ಕೊಡುವೆ ನೀ। ಹಿತದಿಂದ ನೋಡುವೆ ಪತಿತ ಪಾವನ ಮೃತ್ಯುಂಜಯನ ।೨।

ತ್ರಿಜಗ ಪೂಜಿತೆ ಉಮೆ । ಪೊಗಳುವೆನಮ್ಮ ***ವಿಜಯವಿಟ್ಠಲನ*** ನಿಜವನರಿತವನ ।೩।

**ರಾ ಗ – ತೋ ಡಿ : ತಾ ಳ – ಆ ದಿ ತಾ ಳ**

ಕಾಯೆ ಕರುಣಾಂಬುಧಿಯೆ ಇಂದಿರಾದೇವಿ ।ಪ।

ಕಾಯೆ ಕರುಣಾಂಬುಧಿ ಮಾಯೆ ನಾರಾಯಣನ ಜಾಯೆ ಸತತ ಜ್ಞಾನವೀಯೆ ಭಕ್ತರ ಪ್ರೀಯೆ ।ಅ ಪ।

ಕನ್ಯಾಮಣಿಯೆ ಕಾಮಿನಿ ಮಂಗಳವಾಣಿ । ಸನ್ನುತೆ ಲೋಕಜನನಿ ॥

ನಿನ್ನ ಚರಣಯುಗ್ಮವನ್ನು ನಂಬಿದೆ ಸುಪ್ರಸನ್ನೆ ಸರ್ವಜೀವ ಭಿನ್ನೆ ಭಾಗ್ಯಸಂಪನ್ನೆ ।

ಮನ್ನಿಸು ದಯದಿ ನೀ ಬಿನ್ನಪ ಲಾಲಿಸಿ । ಚೆನ್ನೆ ಚಕ್ರಪಾಂಚಜನ್ಯವಿರಾಜಿತೆ । ೧ ।

ಅತಿ ದಯವಂತೆ ನೀನೆಂದು ಬೇಗದಿ ಬಂದು । ತುತಿಸುವೆ ದೀನ ನಾನೆಂದು ॥

ಪತಿತರೊಳಿಡದಲೆ ಗತಿಗೆ ಸಮ್ಮತಳಾಗುತ್ಪತ್ತಿ–ಸ್ಥಿತಿ–ಲಯಕರ್ತೆ ಅತುಳ ಶೋಭನ ಮೂರ್ತೆ ।

ಪತಿಯಲಿ ಜನಿಸಿ ನೀ ಪತಿಗೆ ಸತಿಯಾದೆ । ಪತಿಯ ಸಂಗಡ ಧ್ಯಾನಿತಳಾದೆ ಚರಿತೆ। ೨ ।

ಕುಂಕುಮಾಂಕಿತೆ ರಾಜಿತೆ ನಿಗಮಗೀತೆ । ಪಂಕಜಾಸನ ಮಾತೆ ॥

ಲೋಕವತ್ಸಲೆ ಸರ್ವಾಲಂಕಾರಮಯೆ ರವಿಸಂಕಾಶೆ ಬಹುಕಾಲ ಸಂಕಟವಿನಾಶೆ ॥

ಮಂಕುಮತಿಹರ ***ವಿಜಯವಿಟ್ಠಲನ*** । ಸಂಕಲ್ಪಕೆ ಕಳಂಕ ಬಾರದೆ । ೩ ।

***ರಾಗ – ಪಂತುವರಾಳಿ*** ***ತಾಳ – ರೂಪಕ***

ಜಗಪತಿಯ ತೋರಮ್ಮ ಎನಗೆ ಕರುಣವ ಮಾಡಮ್ಮ । ಪ ।

ಅಘಗಳ ಕಳೆವ ಅಮೋಘ ದೇವನ ಭಕುತರ ಕಾವನ ಎನ್ನಯ ಜೀವನ । ಅ ಪ ।

ಮೃಗಲಾಂಛನವದನೆ ಮೃದು ಸರಸಿಜಸದನೆ ಹಗಲು ಇರುಳು

ನಿನ್ನ ಸಂಯೋಗನ್ನ । ಅನಂತ ಭೋಗನ್ನ ಕಿರೀಟಿಯ ಬೀಗನ್ನ । ೧ ।

ಭ್ರಮರ ಕುಂತಳೆ ಜಾಣೆ ಸುಮನ ಕೋಕಿಲ ಗಾನೆ ಕಮಲ ತುಲಸಿ ಹಾರನ್ನ ।

ಜಗದಾಧಾರನ್ನ । ದಶಾವತಾರನ್ನ । ೨ ।

ಅಜರಾಮರಣ ಸಿದ್ಧಿ ತ್ರಿಜಗದೊಳ್ ಪ್ರಸಿದ್ಧಿ

***ವಿಜಯವಿಟ್ಠಲ*** ಶ್ರೀನಿವಾಸನ್ನ । ತಿರುವೆಂಗಳೇಶನ್ನ ಜಗವ ಪೋಷನ್ನ । ೩ ।

**ರಾ ಗ – ತೋ ಡಿ : ತಾ ಳ – ರೂ ಪ ಕ ತಾ ಳ**

ಎಂದಿಗಾಹುದೋ ನಿನ್ನ ದರುಶನ ಅಂದಿಗಲ್ಲದೇ ಬಂಧ ನೀಗದೋ । ಪ ।

ಗಾನಲೋಲ ಶ್ರೀವತ್ಸಲಾಂಛನ ದಾನವಾಂತಕ ದೀನರಕ್ಷಕ । ೧ ।

ಆರಿಗೆ ಮೊರೆ ಇಡಲೊ ದೇವ ಕೃಷ್ಣ ಹರೀ ನೀ ಸಾರಿ ಬಂದು ಕಾಯೊ ಬೇಗ । ೨ ।

ಗಜವ ಪೊರೆದೆ ಗರುಡಗಮನನೆ ತ್ರಿಜಗಭರಿತ **ವಿಜಯವಿಟ್ಠಲನೆ** । ೩ ।

**ರಾ ಗ – ಮೋ ಹ ನ : ತಾ ಳ – ಆ ದಿ ತಾ ಳ**

ಇಂಥಾ ಪ್ರಭುವ ಕಾಣೆನೊ ಈ ಜಗದೊಳಗಿಂಥಾ ಪ್ರಭುವ ಕಾಣೆನೊ । ಪ ।

ಇಂಥಾ ಪ್ರಭುವ ಕಾಣೆ ಶಾಂತಮೂರುತಿ ಜಗದಂತರಂಗನು ಲಕ್ಷ್ಮೀಕಾಂತꠀ ಸರ್ವಾಂತರ್ಯಾಮಿ । ಅ ಪ ।

ಬೇಡಿದಿಷ್ಟವ ಕೊಡುವ ಭಕ್ತರ ತಪ್ಪು ನೋಡದೆ ಬಂದು ಪೊರೆವ

ಗಾಡಿಕಾರನು ಗರುಡಾರೂಢ ಗುಣವಂತ ಮಹಾಪ್ರೌಢಪ್ರತಾಪಿ ಜಗದಿ ಗೂಢದಿಂ ಸಂಚರಿಪ

ಪಾಡಿ ಪೊಗಳಿ ಕೊಂಡಾಡುವವರ ಮುಂದಾಡುತಲಿಪ್ಪನು ನಾಡೊಳಗಿದ್ದರು

ಕೇಡಿಗನೇ ನಾಡಾಡಿಗಳಂದದಿ ಈಡುಂಟೇನೋ ಈ ವೇಂಕಟಗಿಂಥಾ । ೧ ।

ನಿಗಮತತಿಗಳರಿಯದ ನೀರಜಭವಾದ್ಯಗಣಿತ ಸುರರು ಕಾಣದ ಜಗದೊಡೆಯನು

ಭಕ್ತರುಗಳಿಗೊಲಿದು ತ್ರಿಸ್ಥಾನಗಳ ತ್ಯಜಿಸಿ ಕಲಿ ಯುಗದಿ ಭೂಮಿಗೆ ಬಂದು

ಅಗಣಿತಸುಗುಣಾರ್ಣವ ಶ್ರೀಹರಿಯೇ ಜಗದೊಳು ಸೇವಾದಿಗಳನು

ಕೊಳುತಿಹ ಅಘಹರ ಮೋಕ್ಷಾದಿಗಳನೆ ನೀಡುತ ನಗೆಮೊಗದಲಿ ಚನ್ನಿಗ ನಿಂತಿಹನೊ । ೨ ।

ಭಾರ್ಗವೀ ಭೂಮಿ ವಲ್ಲಭ ಭವದೂರ ಭಕ್ತವರ್ಗಕ್ಕೆ ಇವ ಸುಲಭ

ನಿರ್ಗುಣ ನಿರ್ವಿಕಾರ ಸ್ವರ್ಗದೈಶ್ವರ್ಯಕಿಂತಾನರ್ಘ್ಯ ಪದವನೀವ ದೀರ್ಘಾಯುವಂತನೀತ

ಭಾರ್ಗವರಾಮ ನೃಪರ್ಗಳೆಲ್ಲರಣಾಗ್ರದಿ ಜಯಿಸಿದ ಉಗ್ರಪ್ರತಾಪಿ

ಅಗ್ರಗಣ್ಯ ಸದ್ವಿಗ್ರಹ ಶ್ರೀಮದನುಗ್ರಹ ಮಾಡುತ ದುರ್ಗುಣ ಕಳೆವ । ೩ ।

ನಿರ್ದುಃಖಾನಂದ ಭರಿತಾ ನಿರ್ವಾಣಸುಖಿಕೆ ಆರ್ದ್ರಹೃದಯ ತೋರಿದ

ನಿದ್ರೆಯೊಳಗಿದ್ದವಗುಪದ್ರ ಬಿಡಿಸಿ ದೈತ್ಯ ಕ್ಷುದ್ರನ್ನಾ ಕೊಲಿಸಿ ಸು–

ಭದ್ರ ಜಗಕೆ ಇತ್ತ ನಿರ್ದಯನಲ್ಲ ಸಮುದ್ರಶಯನ ಗೋ–

ವರ್ಧನ ಗಿರಿಯನು ಉದ್ಧರಿಸಿದ ಯದುವರ್ಧನ ದನುಜ ವಿ–

ಮರ್ದನ ಲಕ್ಷ್ಮೀಜನಾರ್ದನ ವರಶೇಷಾದ್ರಿ ನಿವಾಸ । ೪ ।

ವಾರಿಜಾಸನ ಮನ್ಮಥಾ ಈರ್ವರು ಸುತರು ಸರತರಂಗಿಣಿ ತನುಜಾ

ಪುರವೇ ವೈಕುಂಠ ಇಂದ್ರಾದ್ಯಮರರು ಕಿಂಕರರು ಗರುಡ ವಾಹನ

ಉರಗ ಪರಿಯಂಕ ನಿಷ್ಕಳಂಕ ಸರಿ ದೊರೆಗಳ ನಾ–

ನರಿಯೆನು ವೆಂಕಟಗಿರಿಯಲಿ ಇರುತಿಹ ಕರುಣಿಗಳರಸನೆ

ಮರೆಯದೆ ಸಲಹೋ ಶರಣಾಗತರನು ಮರುತಾಂತರ್ಗತ ***ಸಿರಿವಿಜಯವಿಟ್ಠಲ*** । ೫ ।

**ಉ ಗಾ ಭೋ ಗ : ರಾ ಗ – ಪ ಂ ತು ವ ರಾ ಳಿ**

ಕೋಟಿ ಕೋಟಿ ಜನ್ಮಕೆ ನಿನ್ನ ನಾಮವು ಒಂದೇ ಸಾಕು ದಾಟಿಸುವುದು ಭವಸಾಗರವ ।

ಬೂಟಕತನದಲಿ ಹರಿದಾಸನಾದರೆ ತೋಟವಿಲ್ಲದೆ ಮೋಟಿಯೆತ್ತಿದಂತೆ

ನೀಟಾಗದು ಕಾಣೋ ಎಂದಿಗೂ ಯಮ ಭಟರ ಕಾಟ ತಪ್ಪದೊ ಕಾಶಿಯಲ್ಲಿದ್ದರೂ

ಹಾಟಕಾಂಬರಧರ ***ವಿಜಯವಿಟ್ಠಲರೇಯ*** ನಾಟಿಸೊ ನಿನ್ನ ಚರಣಾಬ್ಜದಲಿ ಮನಸು ॥